ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.286/2020

| | | | |
|---|---|---|---|
| ಹೆಸರು | : | ನಾಗರಾಜು | ಸಿ .ಡಬ್ಲ್ಯೂ :4 |
| ತಂದೆ ಹೆಸರು | : | ಬಸವಲಿಂಗಯ್ಯ | ಪಿ .ಡಬ್ಲ್ಯೂ :5 |
| ವಯಸ್ಸು | : | 54 ವರ್ಷ | |
| ಉದ್ಯೋಗ | : | ವ್ಯವಸಾಯ | |
| ವಾಸಸ್ಥಳ | : | ಮಡೇನಹಳ್ಳಿ | |

ಸಾಕ್ಷಿಯನ್ನು ದಿಃ 09-06-2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ಚಾಸಾ -1, ರಿಂದ 3 ರವರು ಗೊತ್ತು .

ದಿಃ 21-05-2020 ರಂದು ಮಧ್ಯಾಹ್ನ 1.00 ಗಂಟೆ ಸಮಯದಲ್ಲಿ ನಾನು ಕಲ್ಲೂರು ಕ್ರಾಸ್ ಗೆ ಚಾಸಾ -3 ರವರನು ಭೇಟಿ ಮಾಡಲು ಹೋಗಿದ್ದೆ . ನಾನು ಮತ್ತು ಚಾಸಾ -3 ರವರು ಮಾತನಾಡುತ್ತಾ ನಿಂತಿದ್ದಾಗ ಚಾಸಾ -1 ರವರ ಮನೆಯ ಬಳಿ ಗಲಾಟೆ ನಡೆಯುತ್ತಿತ್ತು . ಏನಾಯಿತು ಎಂದು ನೋಡಲು ಹೋದೆವು . ಚಾಸಾ -1 ರವರು 1 ನೇ ಆರೋಪಿತರ ಬಳಿ ಈ ಜಾಗ ನಮಗೆ ಸೇರಿದ್ದು , ಇಲ್ಲಿ ಏಕೆ ಮನೆ ಕಟ್ಟುತ್ತಿದ್ದೀರಿ ಎಂದು ಕೇಳುತ್ತಿದ್ದರು . ಆ ಸಮಯ 1 ನೇ ಆರೋಪಿತರು ಅದನ್ನು ಕೇಳಲು ನೀನು ಯಾರು ಎಂದು ಚಾಸಾ -1 ರವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಬೈಯುತ್ತಿದ್ದರು . 1 ನೇ ಆರೋಪಿತರು ಸ್ಥಳದಲ್ಲಿ ಬಿದ್ದಿದ್ದ ದೊಣ್ಣೆಯನ್ನು ತೆಗೆದುಕೊಂಡು ಚಾಸಾ -1 ರವರ ತಲೆಯ ಮೇಲೆ ಹಲ್ಲೆ ಮಾಡಿದರು . ಚಾಸಾ -1 ರವರಿಗೆ ರಕ್ತ ಗಾಯವಾಯಿತು. ಅವರು ಧರಿಸಿದ್ದ ಬನಿಯನ್ ಮೇಲೆ ರಕ್ತದ ಕಲೆಯಾಗಿತ್ತು . ಅವರು ನೋವಿನಿಂದ ಕಿರುಚುತ್ತಿದ್ದರು . ಆ ಸಮಯ ಚಾಸಾ -2 ರವರು ಅಲ್ಲಿಗೆ ಬಂದರು . ಏನಾಯಿತು ಎಂದು ಆಕೆ ಕೇಳಿದಾಗ 1 ನೇ ಆರೋಪಿತರು ಕಲ್ಲು ಒಂದರಿಂದ ಆಕೆಯ ಬಲಗಾಲಿನ ಮೇಲೆ ಹಲ್ಲೆ ಮಾಡಿದರು . ನಾವು ಗಲಾಟೆ ಬಿಡಿಸಿದೆವು . ಆ ಸಮಯ ಆರೋಪಿತರುಗಳು ನಿಮ್ಮನ್ನು ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿದರು . ಆ ದಿನ 1 ನೇ ಆರೋಪಿತರು ಹಲ್ಲೆಗೆ ಬಳಸಿದ್ದ ದೊಣ್ಣೆಯನ್ನು, ಕಲ್ಲನ್ನು ಮತ್ತು ಚಾಸಾ -1 ರವರು ಧರಿಸಿದ್ದ ಬನಿಯನ್ ನೋಡಿದರೆ ಗುರುತಿಸುತ್ತೇನೆ .

ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಮು ಮಾ -1 ರಿಂದ 3 ನ್ನು ನೋಡಿ ಗುರುತಿಸಿದ್ದಾರೆ.

ಆರೋಪಿತರುಗಳನ್ನು ನೋಡಿದರೆ ಗುರುತಿಸುತ್ತೇನೆ . 2 ನೇ ಆರೋಪಿತರು ಗೈರು ಹಾಜರಿದ್ದು ಅವರ ಗುರುತು ಪತ್ತೆಯ ಬಗ್ಗೆ ತಕರಾರು ಇಲ್ಲ ವೆಂದು ಅವರ ಪರ ವಕೀಲರು ತಿಳಿಸಿದ್ದಾರೆ . 1 ನೇ ಆರೋಪಿತರು ಮರಣ ಹೊಂದಿದ್ದಾರೆ . ಮೇಲಿನ ವಿಚಾರಗಳನ್ನು ತಿಳಿಸಿದ್ದು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿದ್ದೇನೆ .

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಪ್ರಾಜ್ಞ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು, ಅದರಂತೆ ಅನುಮತಿ ನೀಡಲಾಯಿತು.

<u>ಪಾಟೀಸವಾಲುಃ ಸ ಸ ಅ ರವರಿಂದಃ</u>-

2 ನೇ ಆರೋಪಿತರು ಸಹಾ ಚಾಸಾ -1 ಮತ್ತು 2 ರವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎಂದರೆ ಸರಿ . ಆರೋಪಿತರುಗಳು ಚಾಸಾ -1 ರವರಿಗೆ ಕೈಗಳಿಂದ ಹೊಡೆದು ಕಾಲಿನಿಂದ ಒದ್ದಿದ್ದಾರೆ ಮತ್ತು 1 ನೇ ಆರೋಪಿತರು ಚಾಸಾ -2 ರವರ ಕೂದಲು ಹಿಡಿದು ಎಳೆದಾಡಿದ್ದಾರೆ ಎಂದರೆ ಸರಿ .

<u>ಪಾಟೀಸವಾಲು: ಆರೋಪಿ ಪರ ವಕೀಲರಿಂದಃ</u>-

ಚಾಸಾ -3 ರವರನ್ನು ಭೇಟಿ ಮಾಡಲು ಕಲ್ಲೂರು ಕ್ರಾಸ್ ಗೆ ಹೋಗಿದ್ದೆ . ನಾನು ಚಾಸಾ -3 ರವರ ಮನೆಗೆ ಹೋಗಿರಲಿಲ್ಲ . ಕಲ್ಲೂರು ಕ್ರಾಸ್ ನಲ್ಲಿ ನಿಂತಿದ್ದೆ . ಯಾವ ಉದ್ದೇಶಕ್ಕೆ ಹೋಗಿದ್ದಿರಿ ಎಂದರೆ ಸಾಕ್ಷಿಯು ಚಾಸಾ -3 ರವರಿಗೆ ಕಲ್ಲೂರಿನಲ್ಲಿ ಯಾವುದೋ ಕೆಲಸವಿತ್ತು ಆದುದರಿಂದ ಹೋಗಿದ್ದೆ ಎಂದು ತಿಳಿಸಿದ್ದಾರೆ . ಚಾಸಾ -3 ರವರು ನನಗೆ ಪರಿಚಯಸ್ಥರು . ಚಾಸಾ -1 ರವರು ನನಗೆ ಪರಿಚಿತರು . ನಾನು ಪಿ ಯು ಸಿ ವ್ಯಾಸಂಗ ಮಾಡಿದ್ದೇನೆ . ಗಲಾಟೆ ನಡೆದಾಗ ಮಧ್ಯಾಹ್ನ 1.00 ಗಂಟೆ ಯಾಗಿತ್ತು . ನಾವು ನಿಂತಿದ್ದ ಸ್ಥಳದಿಂದ ಗಲಾಟೆ ನಡೆಯುತ್ತಿದ್ದ ಸ್ಥಳ ಸಮೀಪದಲ್ಲಿದ್ದು ನಡುವೆ ರಸ್ತೆಯೊಂದಿತ್ತು . ಗಲಾಟೆ ನಡೆಯುತ್ತಿದ್ದ ಸ್ಥಳಕ್ಕೆ ನಾನು ಮತ್ತು ಚಾಸಾ -3 ರವರು ಹೋಗಿದ್ದೆವು . ನಮ್ಮ ಜೊತೆ ಬೇರೆ ಯಾರು ಬಂದಿರಲಿಲ್ಲ . ಗಲಾಟೆ ಸ್ಥಳದಲ್ಲಿ ನಮ್ಮ ಸ್ನೇಹಿತರೊಬ್ಬರು ಇದ್ದರು . ಕೃತ್ಯ ಸ್ಥಳದಲ್ಲಿ ಎಷ್ಟು ಜನ ಸೇರಿದ್ದರು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ . ನಾನು ಹೇಳುವಂತೆ ಮೇಲೆ ಹೇಳಿದ ದಿನಾಂಕದಂದು ನಾನು ಕಲ್ಲೂರು ಕ್ರಾಸ್ ಗೆ ಹೋಗಿಲ್ಲ ಎಂದರೆ ಸರಿಯಲ್ಲ . ಚಾಸಾ -1 ರವರ ಮನೆಯ ಬಳಿ ಗಲಾಟೆ ನಡೆಯುತ್ತಿತ್ತು , ನಾನು ಮತ್ತು ಚಾಸಾ -3 ರವರು ಹೋಗಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಚಾಸಾ -1 ಮತುತ 2 ರವರಿಗೆ 1 ಮತ್ತು 2 ನೇ ಆರೋಪಿತರುಗಳು ಅವಾಚ್ಯ ಶಬ್ದಗಳಿಂದ ನಿಂದಿಸಿದರು , ಮು ಮಾ -1 ರಿಂದ 2 ಹಲ್ಲೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಸದರಿ

ವಿಚಾರಗಳನ್ನು ತಿಳಿಸಿ ಪೊಲೀಸರ ಸಮಕ್ಷಮ ಹೇಳಿಕ ನೀಡಿದ್ದೇನೆ . ಗಲಾಟೆ ನಡೆದ ದಿನವೇ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ . ದೂರು ನೀಡಲು ಠಾಣೆಗೆ ಬಂದಿದ್ದಾಗಲೇ ಹೇಳಿಕೆ ನೀಡಿ ಸಹಿ ಮಾಡಿದ್ದೇನೆ . ನಾನು ಯಾವುದೇ ಗಲಾಟೆ ನೋಡಿಲ್ಲ , ಆದರೂ ಸಹಾ ದುಾರಿನಲ್ಲಿರುವ ವಿವರಗಳನ್ನು ನೋಡಿಕೊಂಡು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

<u>ಮರುವಿಚಾರಣೆ:</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.